ಮಾಡುತ್ತಾರೆ. ಅವರ ಮೇಲೆ ವಿಶ್ವಾಸವಿಡಿ. ಅಧಿಕಾರಿಗಳ ಮೇಲೆ ವಿಶ್ವಾಸವಿಟ್ಟು, MLA ಗಳ ಮೇಲೆ ವಿಶ್ವಾಸವಿಡದಿದ್ದರೆ ಆಗುವುದಿಲ್ಲ. ಆದ್ದರಿಂದ, MLA ಗಳ ಮೇಲೆ ವಿಶ್ವಾಸವಿಡಿ. Task Force ನವರಿಗೆ ಜವಾಬ್ದಾರಿ ಕೊಡಿ. ಅವರಿಗೆ ಏನು ಬೇಕೋ ಮಾಡಿ ಎಂದು ಮತ್ತೆ ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಒಂದು ನಿರ್ಣಯ ಇದೆ.

8. ನಿರ್ಣಯ

ವಿಷಯ: ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ):– ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ಓದುತ್ತೇನೆ.

"ರಾಜ್ಯ ಚುನಾವಣಾ ಆಯೋಗವು 2001ರ ಜನಗಣತಿ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಉದ್ದೇಶಿಸಿರುತ್ತದೆ. ಆದರೆ, ಈಗಾಗಲೇ 2011ರ ಜನಗಣತಿ ಕಾರ್ಯವು ಪೂರ್ಣಗೊಂಡಿದ್ದು, ಅದರ ಆಧಾರದ ಮೇಲೆ Ward ಗಳ ಮೀಸಲಾತಿಗಳಲ್ಲಿ ಬದಲಾವಣೆಯಾಗಿರುವುದರಿಂದ ಹಾಗೂ ಹಲವಾರು ಸ್ಥಳೀಯ ಸಂಸ್ಥೆಗಳು ನಗರಪಾಲಿಕೆ, ನಗರಸಭೆಗಳಾಗಿ ಬಡ್ತಿ ಹೊಂದಲು ಅರ್ಹತೆ ಪಡೆದಿರುವುದರಿಂದ ಮತ್ತು ಸರ್ಕಾರದ ಮೀಸಲಾತಿ ಕಾನೂನುಗಳಲ್ಲಿ ಬಹಳಷ್ಟು ತಿದ್ದುಪಡಿಗಳಾಗಿರುವುದರಿಂದ ನ್ಯಾಯಯುತ ಚುನಾವಣೆ ನಡೆಸಲು ಮತ್ತು ಎಲ್ಲ ವರ್ಗಗಳಿಗೆ ನ್ಯಾಯ ಒದಗಿಸಲು ಅನುವಾಗುವಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಬೇಕೆಂದು ಈ ಸದನವು ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತದೆ"

ಅಧ್ಯಕ್ಷರು:– ಚರ್ಚೆ ಏನಾದರೂ ಉಂಟೇ?

ಶ್ರೀ ತನ್ವೀರ್ ಸೇಠ್:– ಸನ್ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, ಶ್ರೀ ಗೂಳಿಹಟ್ಟಿ ಡಿ. ಶೇಖರ್‌ರವರು ಪ್ರಸ್ತಾವನೆ ಮಾಡಿದ್ದಾರೆ. ಸಂವಿಧಾನಬದ್ಧವಾಗಿ ನಮ್ಮ ಜನರಿಗೆ ಏನು ಮೀಸಲಾತಿ ಒದಗಿಸಬೇಕು, ಹೆಣ್ಣುಮಕ್ಕಳಿಗೆ 50% reservation ಕೊಡಬೇಕೆಂದು ಶ್ರೀಮತಿ ಸೋನಿಯಾ ಗಾಂಧಿಯವರು ಏನು ತೀರ್ಮಾನ ಮಾಡಿದ್ದಾರೆ, ಅದರ ವಿರುದ್ಧವಾಗಿ ಈಗ ಚುನಾವಣೆ ನಡೆಸಲಿಕ್ಕೆ ಚುನಾವಣಾ ಆಯೋಗ ಮತ್ತು ಸರ್ಕಾರ ಇವತ್ತು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಇವತ್ತು ರಾಜ್ಯದ ಪರಿಸ್ಥಿತಿಯಲ್ಲಿ census ಈಗಾಗಲೇ ತೀರ್ಮಾನವಾಗಿ ಅವರು ಮಾರ್ಚ್‌ಗೆ report ಕೊಡುತ್ತಿದ್ದಾರೆ. ಉದಾಹರಣೆಗೆ, ಅವರು up gradation of Municipality ವಿಚಾರ ಹೇಳಿದರು. ನನ್ನ ತಾಲ್ಲೂಕಿಗೆ ಮೊನ್ನೆ ಅವರು ನಗರೋತ್ಥಾನ ಹಣ ಎಂದು 5–5 ಕೋಟಿ ರೂಪಾಯಿಗಳನ್ನು ಕೊಟ್ಟರು. ಪಕ್ಕದಲ್ಲಿರುವ ರಾಮನಗರಕ್ಕೆ ಜನಸಂಖ್ಯೆ ಆಧಾರದ ಮೇಲೆ 30 ಕೋಟಿ ರೂಪಾಯಿಗಳನ್ನು ಕೊಟ್ಟರು. ಚನ್ನಪಟ್ಟಣಕ್ಕೆ 15 ಕೋಟಿ ರೂಪಾಯಿ ಕೊಟ್ಟರು. ನಮಗೂ ಅವರಿಗೂ ಕೇವಲ 2000 difference ಇದೆ. ಈಗಾಗಲೇ population ಜಾಸ್ತಿ ಆಗಿದೆ. Up gradation ವಿಚಾರದಲ್ಲಿ TMC ಯಿಂದ CMC ಆಗಬೇಕು, CMC ಯಿಂದ ಬೇರೆ population ಗೆ ಆಗಬೇಕು. ಅದೂ ಕೂಡ ಇವತ್ತು ನಮಗೆಲ್ಲ loss ಆಗುತ್ತಿದೆ. ಏಕೆಂದರೆ, ಜನಸಂಖ್ಯೆ ಆಧಾರದ ಮೇಲೆ ಹಣ ಬಿಡುಗಡೆಯಾಗುತ್ತಿದೆ. ಈಗ ಶಾಲಾ ಕಾಲೇಜುಗಳಲ್ಲಿ ಫೆಬ್ರವರಿಯಲ್ಲಿ ಪರೀಕ್ಷೆ ಪ್ರಾರಂಭವಾಗುತ್ತಿದೆ. ಈ ಸಂದರ್ಭದಲ್ಲಿ ಸರ್ಕಾರ ಏಕಾಏಕಿ ಯಾವುದೇ preparation ಮಾಡಿಕೊಳ್ಳದೆ Election Commission ಎಂದರೆ ಇದಕ್ಕೆ ಸರ್ಕಾರ ಜವಾಬ್ದಾರಿ. ಏಕೆಂದರೆ, Election Commission ಅನ್ನು create ಮಾಡಿದವರು ಯಾರು. ಸಂವಿಧಾನ ಇರಬಹುದು. ಸರ್ಕಾರದವರು Election ಮಾಡಲಿಲ್ಲವೆಂದರೆ Election Commission ಏನು ಮಾಡುವುದಕ್ಕಾಗುತ್ತದೆ? ದಯವಿಟ್ಟು ನೀವು Election Commission ಗೆ ವಿಚಾರವನ್ನು ತಿಳಿಸಬೇಕು, Supreme Courtಗೆ ತಿಳಿಸಬೇಕು. ಸರ್ಕಾರ Supreme Court ಗೆ ಎಲ್ಲಾ

ವಾಸ್ತವಾಂಶವನ್ನು ತಿಳಿಸುವುದರಲ್ಲಿ ವಿಫಲವಾಗಿದೆ. ಆದರೂ ಕೂಡ ಈ ಸಂದರ್ಭದಲ್ಲಿ ನಮಗೆ ಮೂಲಭೂತವಾಗಿ backward classes ನವರಿಗೆ, ಹೆಣ್ಣುಮಕ್ಕಳಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕಾಗಿದೆ. ಇವತ್ತು ಗೂಳಿಹಟ್ಟಿ ಡಿ. ಶೇಖರ್‌ರವರು ಏನು ಪ್ರಸ್ತಾವನೆ ತಂದಿದ್ದಾರೆ ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲವಿದೆ. ಬಹುಶಃ ನಮ್ಮೆಲ್ಲರ ಬೆಂಬಲ ಇದೆ. ಆದಷ್ಟು ನ್ಯಾಯ ಸರಿಪಡಿಸಿ ಈ ಚುನಾವಣೆಯನ್ನು ತಾವು ಏರ್ಪಾಡು ಮಾಡಬೇಕೆಂದು ನಾನು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯಿಸುತ್ತೇನೆ. ಸರ್ಕಾರ ಹೆದರಬೇಕಾಗಿಲ್ಲ. ಯಾವ ಕಾರಣಕ್ಕೂ ನೀವು ಜೈಲಿಗೆ ಹೋಗುವುದಿಲ್ಲ. Chief Secretary ಯವರು contempt ಆಗುತ್ತದೆ ಎಂದು ಹೆದರಬಹುದು. Contempt ಆಗುವುದಿಲ್ಲ, ಏನೂ ಆಗುವುದಿಲ್ಲ, ತಲೆಕೆಡಿಸಿಕೊಳ್ಳಬೇಡಿ. ರಾಜ್ಯದ ಜನರಿಗೋಸ್ಕರ ಒಂದೇ ಒಂದು ದಿನ ಜೈಲಿಗೆ ಹೋದರೂ ತೊಂದರೆ ಇಲ್ಲ. ನೀವು ತಲೆಕೆಡಿಸಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಜವಾಬ್ದಾರಿ ಹೊತ್ತುಕೊಳ್ಳಿ. ಇನ್ನು 2 ತಿಂಗಳಿಗೆ ಅವರು retire ಆಗುತ್ತಾರೆ. ತಲೆಕೆಡಿಸಿಕೊಳ್ಳದೆ ಇವೆಲ್ಲ ಬರುವಷ್ಟರ ಹೊತ್ತಿಗೆ ಸಮಸ್ಯೆ ಆಗುತ್ತದೆ. ಒಬ್ಬ ವ್ಯಕ್ತಿಯ ಪ್ರತಿಷ್ಠೆಯಿಂದ ಇಂಥ ಕೆಲಸಗಳು ಆಗುತ್ತಿವೆ. ಇದು ಆಗಬಾರದು. ಈ ರಾಜ್ಯದ ಎಲ್ಲಾ ಜನತೆಯ ಗೌರವ ಕಾಪಾಡಬೇಕು. ಸೂಕ್ತ ಕಾಲದಲ್ಲಿ Municipality election, Corporation election ನಡೆಯಬೇಕು. ಅದಕ್ಕೆ ತಾವು ಅನುಮತಿ ಮಾಡಿಕೊಡಬೇಕು. ಧೈರ್ಯವಾಗಿ ಈ ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ತನ್ವೀರ್ ಸೇಠ್:- ಈಗ ನಮ್ಮ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ ನಾನು ಪರಿಪೂರ್ಣ ಪ್ರಮಾಣದಲ್ಲಿ ಅವರಿಗೆ ಬೆಂಬಲವನ್ನು ಸೂಚಿಸುತ್ತೇನೆ. ಸರ್ಕಾರ, ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆ ಆಧಾರದ ಮೇಲೆ ಮೇಲ್ದರ್ಜೆಗೇರಿಸುವ ಕೆಲಸಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಪ್ರಸ್ತಾವನೆಗಳು ಸರ್ಕಾರದ ಮುಂದೆ ಬಂದಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡಿದ ನಂತರ ಬೃಹತ್ ಮೈಸೂರು

ಮಹಾನಗರ ಪಾಲಿಕೆ ಮಾಡಬೇಕೆನ್ನುವ ಪ್ರಸ್ತಾವನೆ ಈಗಾಗಲೇ ಸರ್ಕಾರದ ಮುಂದಿದೆ. ನಾವು ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಂಥ ಸಂದರ್ಭದಲ್ಲಿ ಆ ವ್ಯಾಪ್ತಿಯನ್ನು ಸೂಚಿಸುವ ಸಂದರ್ಭದಲ್ಲಿ ಅನೇಕ ಸ್ಥಳೀಯ ಸಂಸ್ಥೆಗಳಿಂದ ಆಗಬೇಕಾಗಿರುವ ಮೂಲಭೂತ ಸೌಕರ್ಯಗಳ ಕುರಿತಂತೆ ಜನರು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇವತ್ತು ಅಭಿವೃದ್ಧಿಯೇ ನಮ್ಮ ಮಂತ್ರ ಎಂದು ಹೇಳುವಂಥದ್ದು, ಅನುದಾನ ಕೊಡುವುದರಲ್ಲಿಯೂ ಸಾಕಷ್ಟು ತಾರತಮ್ಯ ಏನು ಆಗುತ್ತಿದೆ, ಆ ವಿಚಾರಗಳನ್ನು ಸರ್ಕಾರ ಮತ್ತೊಮ್ಮೆ ಪರಿಶೀಲಿಸಿ ಈಗಾಗಲೇ ಸರ್ಕಾರದ ಮಟ್ಟದಲ್ಲಿರುವಂಥ ಪ್ರಸ್ತಾವನೆಗಳು ಏನಿವೆ ಅವುಗಳನ್ನು ತುರ್ತುಗತಿಯಲ್ಲಿ ಏನು ಮಾಡಬೇಕಾಗಿದೆಯೋ ಅದನ್ನು ಅವರು ಮಾಡಿ ಚುನಾವಣಾ ಆಯೋಗಕ್ಕೆ ಒಂದು ಸ್ಪಷ್ಟವಾದ ವರದಿಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಗೂಳಿಹಟ್ಟಿ ಶೇಖರ್‌ರವರೇನು ನಿರ್ಣಯ ತಂದಿದ್ದಾರೆ, ಇದು ಎಲ್ಲಕ್ಕಿಂತ ಮುಖ್ಯವಾದುದು. 2011ರ ಜನಗಣತಿ ಪ್ರಕಾರ ಚುನಾವಣೆಗೆ ಹೋಗಬೇಕಾಗಿದೆ. ಆ ಸಂಖ್ಯೆಯಲ್ಲಿ ಹೆಚ್ಚಿನ ಹೆಚ್ಚಿನ Backward Class, OBC, SC/ST, ಎಲ್ಲರಿಗೂ ಈಗ ತಕ್ಷಣ ಚುನಾವಣೆ ಮಾಡಿದರೆ ಅನ್ಯಾಯವಾಗುತ್ತದೆ. ಏಕೆಂದರೆ, ಜನಗಣತಿ ಹೆಚ್ಚಿಗೆ ಅದಂಗೆ ಅಲ್ಲಿ ಮೀಸಲಾಗಿ ಪ್ರಮಾಣ ಹೆಚ್ಚಿಗೆ ಬರುತ್ತದೆ. ಜೊತೆಗೆ ಇವರು 50% ಮಹಿಳೆಯರಿಗೆ ಮೀಸಲಾತಿ ಕೊಡಬೇಕೆಂದು ಹೊಸದಾಗಿ Bill ತಂದಿರುವುದಿದೆ. Supreme Court order ಕೂಡ ಇದೆ. ಆ ಮೀಸಲಾತಿಯ ಪ್ರಕಾರ ಮಾಡಬೇಕು ಎನ್ನುವ ನಿಟ್ಟಿನಲ್ಲಿ 50% ಇನ್ನೂ ಅದು apply ಆಗಿಲ್ಲ. ಹೀಗಾಗಿ ಎಲ್ಲೋ ಒಂದು ಕಡೆಗೆ ನಾವು ಗಡಿಬಿಡಿಯಲ್ಲಿ ಮಾಡಿದಾಗ ಆ ವರ್ಗಕ್ಕೆ ನಷ್ಟವಾಗುತ್ತದೆ ಎನ್ನುವ ನಿಟ್ಟಿನಲ್ಲಿ ಮತ್ತು ಈ ಒಂದು ನಿರ್ಣಯಕ್ಕೆ ವಿಶೇಷವಾಗಿ ನಾವು ಅದಕ್ಕೆ ಬೆಂಬಲ ಸೂಚಿಸುತ್ತೇವೆಂದು ಹೇಳುತ್ತೇವೆ.

ಡಾ: ಎಂ.ಸಿ. ಸುಧಾಕರ್ (ಚಿಂತಾಮಣಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಗೂಳಿಹಟ್ಟಿ ಶೇಖರ್‌ರವರು ತಂದಿರುವ ನಿರ್ಣಯಕ್ಕೆ ಬೆಂಬಲಿಸುತ್ತಾ ಮುಖ್ಯವಾದ ಒಂದು ವಿಚಾರ ಇಲ್ಲಿ ಗಮನಿಸಬೇಕು. ಇಲ್ಲಿ ಈಗ ಇರತಕ್ಕಂಥದ್ದು 2011 ರ ಜನಗಣತಿಯ ವರದಿ ಬರುವುದಕ್ಕೆ ಒಂದು ಅಥವಾ ಎರಡು ತಿಂಗಳು ಬಾಕಿ ಇದೆ. ಮತ್ತೆ ನಾವೇನಾದರೂ ಈಗ ಹಳೆಯ ಜನಗಣತಿ ಪ್ರಕಾರ ಚುನಾವಣೆ ಮಾಡಿದಾಗ ಯಾವತ್ತಿಗೂ ಇದು ಹತ್ತು ಹತ್ತು ವರ್ಷಕ್ಕೂ ಅದೇ ಅನ್ಯಾಯವಾಗುತ್ತಾ ಹೋಗುತ್ತದೆ. ದಯವಿಟ್ಟು ನಾವು ಇದನ್ನು ಮನಗಾಣಬೇಕಾಗುತ್ತದೆ. Every ten years the same thing keeps on repeating. ಈಗ ಏನಾಗುತ್ತದೆ ಯಾವ್ಯಾವ ವರ್ಗಕ್ಕೆ ಯಾವ್ಯಾವ ಸಂದರ್ಭಕ್ಕೆ ಮೀಸಲಾತಿ ಒದಗಿಸಿ ಕೊಡಬೇಕಾಗಿತ್ತೋ ಬಹುಶಃ ಆ ವರ್ಗದ ಜನರಿಗೆ ನಾವು ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಮತ್ತೊಂದು ಮುಖ್ಯವಾದ ವಿಚಾರ, ಹಿಂದೆ ಸ್ಥಳೀಯ ಸಂಸ್ಥೆಗಳಿಗೆ ಏನು ಅನುದಾನ ಬರುತ್ತಿತ್ತು, ಅಂದಿನ ಕಾಲಕ್ಕೂ ಇಂದಿನ ಕಾಲಕ್ಕೂ ಬಹಳ ವ್ಯತ್ಯಾಸವಿದೆ. ಈಗ ಮಾತನಾಡಿದಂಥ ಹಿರಿಯರೆಲ್ಲರೂ ಹೇಳಿದ್ದಾರೆ. ಇವತ್ತು ಬಹಳ World Bank schemes ಇರಬಹುದು, Asian Development Bank schemes ಇರಬಹುದು, KMRP ಮತ್ತೊಂದು ಬಹಳಷ್ಟು ಸರ್ಕಾರದ ನಗರೋತ್ಥಾನ ಕಾರ್ಯಕ್ರಮ ಇರಬಹುದು. ಇವೆಲ್ಲದರಲ್ಲೂ ವ್ಯತ್ಯಾಸವಾಗತಕ್ಕಂಥದ್ದು ಇದೆ. ಆಗಿಂದಾಗ್ಗೆ ಮೇಲ್ದರ್ಜೆಗೇರಿಸುವಂಥ ಪ್ರಕ್ರಿಯೆ ಏನು ಆಗಬೇಕಾಗುತ್ತದೆ ಬಹುಶಃ ಎರಡು ತಿಂಗಳು ಅಥವಾ ಮೂರು ತಿಂಗಳು ಹೊಸ 2011 ರ ಜನಗಣತಿಯ ಆಧಾರದಲ್ಲಿ ಮಾಡುವುದರಲ್ಲಿ ಅಂಥ ದೊಡ್ಡ ಸಂವಿಧಾನಕ್ಕೆ ಅಪಚಾರ ಮಾಡಿದ ಹಾಗೆ ಆಗುವುದಿಲ್ಲವೆನ್ನುವುದು ಒಂದು ವಿಷಯ. ದಯವಿಟ್ಟು ಸರ್ಕಾರ ಈ ಕೂಡಲೇ ಚುನಾವಣಾ ಆಯೋಗಕ್ಕೆ ಮತ್ತು ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ಸರಿಯಾಗಿ ತರಬೇಕಾಗುತ್ತದೆ. ಇದು ಪ್ರತಿ ಹತ್ತು ವರ್ಷಕ್ಕೊಮ್ಮೆ repeat ಆಗುತ್ತದೆ. ಬಹುಶಃ ತಾವು ಇದನ್ನು ಹೇಳಿದಿರೋ ಇಲ್ಲವೋ ನನಗೆ ಗೊತ್ತಿಲ್ಲ. ಆದುದರಿಂದ, ನಗರ ಪ್ರದೇಶದಲ್ಲಿ

ಬಹಳಷ್ಟು ಜನಸಂಖ್ಯೆ ಹೆಚ್ಚಾಗುತ್ತಿದೆ, ಗ್ರಾಮೀಣ ಪ್ರದೇಶದಲ್ಲಿ ಅಷ್ಟಾಗಿ ಜನಸಂಖ್ಯೆ ಹೆಚ್ಚಾಗುತ್ತಿಲ್ಲ. ನಗರದ ಜನಸಂಖ್ಯೆ ಏನು ಹೆಚ್ಚಾಗುತ್ತಿದೆ ಅದರಿಂದ ಅಭಿವೃದ್ಧಿ ಮತ್ತು ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡುವ ಎಲ್ಲಾ ದೃಷ್ಟಿಯಿಂದ, ಕೇವಲ ಚುನಾವಣೆ ದೃಷ್ಟಿಯಿಂದ ಒಂದೇ ಅಲ್ಲ, ಎಲ್ಲಾ ವಿಚಾರಗಳಿಗೂ ಗಮನ ಹರಿಸಿ, ಈ ಚುನಾವಣೆಯನ್ನು 2011ರ ಜನಗಣತಿಯ ಆಧಾರದ ಮೇಲೆ ಈ ಎಲ್ಲಾ ವರ್ಗಗಳ ವಿಚಾರ ಗಮನದಲ್ಲಿಟ್ಟುಕೊಂಡು ಚುನಾವಣೆ ಪ್ರಕ್ರಿಯೆ ನಡೆಸಿದರೆ ಸೂಕ್ತ ಎನ್ನುವ ಸಲಹೆಯನ್ನು ಮತ್ತು ನನ್ನ ಒಂದು ಸಹಮತಿಯನ್ನು ಈ ಒಂದು ನಿರ್ಣಯಕ್ಕೆ ವ್ಯಕ್ತಪಡಿಸಿ ತಮಗೆ ನಾನು ವಂದಿಸುತ್ತೇನೆ.

ಶ್ರೀ ಬಾಲಚಂದ್ರ ಜಾರಕೊಹೊಳಿ (ಪೌರಾಡಳಿತ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಗೂಳಿಹಟ್ಟಿ ಶೇಖರ್‌ರವರು ಮಂಡಿಸಿರುವಂಥ ಈ ನಿರ್ಣಯದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಮತ್ತು ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ್‌ರವರು ಅನೇಕ ವಿಚಾರಗಳನ್ನು ಸದನದ ಗಮನಕ್ಕೆ ತಂದರು. ನಾನೂ ಕೆಲವು ವಿಚಾರಗಳನ್ನು ಈ ಸದನದ ಗಮನಕ್ಕೆ ತರಬೇಕಾಗುತ್ತದೆ. ನಮ್ಮ ಸರ್ಕಾರ Supreme Court ನಲ್ಲಿ, ತಾವು failure ಆಗಿದ್ದೀರಿ ಎಂದು ಹೇಳಿದಿರಿ ಖಂಡಿತ ನಾವು failure ಆಗಿಲ್ಲ. ಏಕೆಂದರೆ, ಇದರ ಬಗ್ಗೆ ನಾವು ಸಾಕಷ್ಟು ಹೋರಾಟ ಮಾಡಿದ್ದೇವೆ. Supreme Court ನಲ್ಲಿ ಆದ Judgement ನ್ನು ತಾವು ನೋಡಬಹುದು. ಆ Judgement ನಲ್ಲಿ ಸರ್ಕಾರದ ಪರವಾಗಿ ಇರುವಂಥ ಹಿರಿಯ ನ್ಯಾಯವಾದಿ ಪಿ.ಪಿ. ರಾವ್‌ರವರ argument ಇರಬಹುದು, ಅಥವಾ ರಾಜೀವ್ ಚಾವ್ಲ ಎನ್ನುವವರೊಬ್ಬ ಬಿಜಾಪುರದವರು Public Interest Litigation ಹಾಕಿದ್ದರು. ಅಲ್ಲಿ ವಾದ ಮಂಡಿಸಿದ ಹಿರಿಯ ವಕೀಲರಾದ ಮುಕುಲ ಇರಬಹುದು, ಅವರ ಒಂದು ಶಬ್ದವನ್ನು ಆ petition ನಲ್ಲಿ mention ಮಾಡಿಲ್ಲ. ಅವರ argument ನಲ್ಲಿ ಒಂದು ಶಬ್ದವನ್ನು mention ಮಾಡಿಲ್ಲ. ಆದರೆ, ಆಯೋಗದ ನ್ಯಾಯವಾದಿಗಳಾದ ಸನ್ಮಾನ್ಯ ಫಣೀಂದ್ರರವರು ಹೇಳಿದಂಥದ್ದು Judgement

ನಲ್ಲಿ ಬರೆದಿದ್ದಾರೆ. ಅಂದರೆ, ಪಿ.ಪಿ. ರಾವ್‌ರವರ ಮತ್ತು ಮುಕುಲ ರವರ ಒಂದು ಶಬ್ದ ಬಂದಿಲ್ಲ. ಅದಕ್ಕೆ Supreme Court ನ ಆದೇಶವನ್ನು ಕಾನೂನಿನ ಬಗ್ಗೆ ಚರ್ಚೆ ಮಾಡುವುದು ಸೂಕ್ತವಲ್ಲ. ಆದರೆ, Supreme Court ಅವರು Census Department ನವರಿಗೆ ನೀವು Census reportನ್ನು ಯಾವಾಗ ಕೊಡುತ್ತೀರಿ ಎಂದು ಒಂದು notice ಕೊಟ್ಟಿತು. Census Department ಗೆ ಕರ್ನಾಟಕ ಸರ್ಕಾರ ಪತ್ರ ಬರೆದಾಗ, Census ರವರು ಮಾರ್ಚ್‌ನಲ್ಲಿ ಕೊಡುತ್ತೇವೆಂದು ಪತ್ರ ಬರೆದರು. ನಂತರ Supreme Court ನಲ್ಲಿ ಅವರ ನ್ಯಾಯವಾದಿಗಳು ಬಂದು ಹೇಳಿದ್ದು ಏನೆಂದರೆ, ಏಪ್ರೀಲ್ 30 ಕ್ಕೆ ನಾವು Censes Report ಅನ್ನು ಕರ್ನಾಟಕದ್ದು ಕೊಡುತ್ತೇವೆಂದು ಹೇಳಿದರು. ಮತ್ತೊಮ್ಮೆ ಕರ್ನಾಟಕ ಸರ್ಕಾರ ಪತ್ರ ಬರೆದಾಗ ಇವರು ಜೂನ್–ಜುಲೈನಲ್ಲಿ ಕೊಡುತ್ತೇವೆಂದು ಪತ್ರ ಬರೆದರು. ಅಂದರೆ ಈ ತರಹದ ಮೂರು ತರಹದ ಹೇಳಿಕೆ ಕೊಟ್ಟರು. ಈಗಾಗಲೇ ಈ ಸದನದ ಎಲಾ ಸದಸ್ಯರ ಎಲ್ಲಾ ಪಕ್ಷದವರ ಅಭಿಪ್ರಾಯವನ್ನು ನಾವು ಅರ್ಥ ಮಾಡಿಕೊಂಡು, 2011ರ ಜನಗಣತಿ ಪ್ರಕಾರ ಆಗಬೇಕೆನ್ನುವುದು ಎಲ್ಲರ ಭಾವನೆ ಇದೆ. ಇದರಲ್ಲಿ ಸಂವಿಧಾನದಲ್ಲಿ ಕಾನೂನು ಬಗ್ಗೆ ಎಷೊಂದು ಚರ್ಚೆ ಮಾಡುತ್ತೇವೆ, ಇದೇ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಅನ್ಯಾಯವಾಗಬಾರದು ಎನ್ನುವುದನ್ನು ನಮ್ಮ ಸಂವಿಧಾನ ಎತ್ತಿ ತೋರಿಸುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ತಾವೇನು ತಮ್ಮ ಅಭಿಪ್ರಾಯವನ್ನು ಹೇಳಿದಿರಿ, ಕರ್ನಾಟಕ ಚುನಾವಣಾ ಆಯೋಗಕ್ಕೆ, ಈ ಸದನದ ಅಭಿಪ್ರಾಯ ಈ ರೀತಿ ಇದೆ ಎಂದು ನಾವು ಮನವಿ ಮಾಡುತ್ತೇವೆ. ಅದಕ್ಕೆ ಇದಾದ ನಂತರ Supreme Court ನಲ್ಲಿ ಫೆಬ್ರವರಿ 1 ಕ್ಕೆ ನಮ್ಮದೇನು SLP ವಜಾ ಆದ ತಕ್ಷಣ ನಾವು ಮರು ದಿವಸ Review Petition ಹಾಕಿದ್ದೇವೆ.

ಶ್ರೀ ಸಿದ್ದರಾಮಯ್ಯ:– Reivew petition ಏನು ಆಯಿತು?

ಶ್ರೀ ಬಾಲಚಂದ್ರ ಜಾರಕಿಹೊಳಿ:– Reivew petition pending ಇದೆ.

ಶ್ರೀ ಸಿದ್ದರಾಮಯ್ಯ:– Reivew petition hearing ಇಲ್ಲವೇ?

ಶ್ರೀ ಸುರೇಶ್ ಕುಮಾರ್ ಎಸ್ (ಕಾನೂನು ಸಚಿವರು):– Reivew petition ಆ ರೀತಿಯಾಗಿ date hearing fix ಆಗುವುದಿಲ್ಲ. ಅದು ಕೋರ್ಟಿಗೆ ಬರುವುದಿಲ್ಲ. ಅದು chambers ನಲ್ಲಿಯೇ ಚರ್ಚೆಯಾಗುತ್ತದೆ.

ಶ್ರೀ ಬಾಲಚಂದ್ರ ಜಾರಕೊಹೊಳಿ (ಪೌರಾಡಳಿತ ಸಚಿವರು):– ಈಗಾಗಲೇ ಅಲ್ಲಿ Review Petition pending ಇರುವುದರಿಂದ, ನಿನ್ನೆ ನಾವೊಂದು cabinet ನಿರ್ಣಯ ಮಾಡಿ, ಈ ತರಹ ನಮ್ಮದು Review Petition ಇದೆ, ಅದಕ್ಕೆ ನಮಗೆ ಕಾಲಾವಕಾಶ ಬೇಕೆಂದು ನಾವು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇವೆ. ಮನವಿ ಮಾಡಿದ ತಕ್ಷಣ ನಿನ್ನೆ ರಾತ್ರಿಯೇ ಅವರು ನಮಗೊಂದು ಪತ್ರ ಬರೆದರು. ಈಗಾಗಲೇ Supreme Court ನವರು ನಮಗೆ ಈ ತರಹ ಆದೇಶ ಮಾಡಿರುವುದರಿಂದ, ನಾವು ಚುನಾವಣೆ ಮಾಡಲೇಬೇಕಾಗುತ್ತದೆ ಎಂದು ಸರ್ಕಾರಕ್ಕೆ ಒಂದು ಪತ್ರ ಬರೆದರು. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾನ್ಯ ಗೂಳಿಹಟ್ಟಿ ಶೇಖರ್‌ರವರು ಏನು ನಿರ್ಣಯ ಮಂಡಿಸಿದ್ದಾರೆ ಇದಕ್ಕೆ ಎಲ್ಲಾ ಸದಸ್ಯರ ಅಭಿಪ್ರಾಯವಿದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ):– ಇದು ನನಗೆ ಅರ್ಥವಾಗುವುದಿಲ್ಲ. ಈ ಚುನಾವಣೆ ಮಾಡುವ ಜವಾಬ್ದಾರಿಕೆ ಸರ್ಕಾರದ ಪರವಾಗಿ ಚುನಾವಣಾ ಆಯೋಗಕ್ಕೆ ಇರುತ್ತದೆ. ಚುನಾವಣಾ ಆಯೋಗದವರು ಒಂದು Nomification ಮಾಡಿದಾಕ್ಷಣಕ್ಕೆ ಚುನಾವಣೆ ಅವರು ಮಾಡುತ್ತಾರೆಯೇ? Notification ಅವರು receive ಟಮಾಡುತ್ತಾರೆಯೇ? ಯಾರು ಮಾಡುವುದು? ಸರ್ಕಾರದ ಯಂತ್ರ ಮಾಡಬೇಕು. ಸರ್ಕಾರದ ಸಹಕಾರ ಇಲ್ಲದೇ ಚುನಾವಣಾ ಆಯೋಗ ಏಕಪಕ್ಷೀಯವಾಗಿ ಏಕಾಏಕಿ ಯಾವ ರೀತಿಯಾಗಿ ತೀರ್ಮಾನ ಮಾಡುವುದಕ್ಕೆ ಬರುತ್ತದೆ? ಇದು ನನಗೆ ಅರ್ಥವಾಗುತ್ತಿಲ್ಲ. ಹೌದು ಅವರಲ್ಲಿ ಲೋಪವಾಗಬಾರದು ಎನ್ನುವ ಕಾರಣಕ್ಕೋಸ್ಕರ Court ಗೆ ಹೋಗಿದ್ದಾರೆ ಅವರು ನ್ಯಾಯಯುತವಾಗಿ ಏನೆಲ್ಲಾ ಮಾಡಬೇಕೋ

ಅದನ್ನೆಲ್ಲಾ ಮಾಡಿದ್ದಾರೆ. ಸಂವಿಧಾನದ ಚೌಕಟ್ಟಿನಲ್ಲಿಯೇ ಅವಧಿ ಮುಗಿಯುವುದಕ್ಕಿಂತ ಮುಂಚೆಯೇ ಚುನಾವಣೆಗಳನ್ನು ನಡೆಸಬೇಕು, ಆ ಎಲ್ಲ ಕ್ರಮಗಳನ್ನು ಅವರು ಮಾಡಿದ್ದಾರೆ. ಆದರೆ, ಚುನಾವಣೆ ಮಾಡಬೇಕಾದಂಥ ಸಂದರ್ಭದಲ್ಲಿ ಸರಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ಅವರೊಂದು Notification ಕೊಟ್ಟುಬಿಟ್ಟರೆ ನನ್ನ ಕೆಲಸ ಮುಗಿದು ಹೋಯಿತು ಎಂದು ಹೇಳುವುದಕ್ಕಾಗುತ್ತದೆಯೇ? ಇದರಲ್ಲಿ ನನಗೆ ಅರ್ಥವಾಗುವುದಿಲ್ಲ. ಎಲ್ಲಾದರೂ ಒಂದು ಕಡೆಗೆ ಚುನಾವಣಾ ಆಯೋಗಕ್ಕೆ ಸರಕಾರಕ್ಕೂ ಏನಾದರೂ ವ್ಯತ್ಯಾಸವಿದೆಯೇ? ಏನಿದೆಯೋ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಮಗೆ ಏನು ಭಾವನೆ ಬರುತ್ತದೆ ಎಂದರೆ, ಅದೇ ಭಾವನೆ ನಮಗೆ ಬರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಯಲ ತೀರ್ಪು ಕೊಡುವಂಥ ಸಂದರ್ಭದಲ್ಲಿಯೂ ಕೂಡ clear ಆಗಿ ಹೇಳಿದ್ದಾರೆ. ಈ ರಾಜ್ಯದಲ್ಲಿ ಅಥವಾ ಸಂವಿಧಾನದಲ್ಲಿ ಆಗತಕ್ಕಂಥ ಕಾನೂನಿನ ಅನ್ವಯ ನಡೆಯಬೇಕೆಂದು ಹೇಳಿದ್ದಾರೆ. 50% reservation ಕೊಡಬೇಕೆನ್ನುವುದು ನಾವು ಮಾಡಿರುವ ಕಾನೂನು. ಕಾನೂನು ಪ್ರಕಾರ ಅವರು ಮಾಡಬೇಕಾಗುತ್ತದೆ. ಚುನಾವಣಾ ಆಯೋಗದವರು ಅನುಸರಿಸಲೇ ಬೇಕಾಗುತ್ತದೆ. Supreme Court ನವರು ಏನು ಹೇಳುತ್ತಾರೆಂದರೆ, It would be open to the State Election Commission to proceed on the basis of the reservation of seats as are presently existing ಅಂದ ಮೇಲೆ it is open to the State Election Commission, ಅಂದರೆ ಅವರ ಕೈಯಲ್ಲಿದೆ ನಿರ್ಣಯ ಮಾಡುವುದು. ಅಂದರೆ ಅವರು ನಮಗೇನು ದೊಡ್ಡ ತೊಂದರೆಯಾಗಿ ಬಿಡುತ್ತದೆ ಎನ್ನುವ ಕಾರಣಕ್ಕೋಸ್ಕರ ಏನೋ ಒಂದು ರೀತಿಯಲ್ಲಿ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಳ್ಳುವುದಕ್ಕೋಸ್ಕರ ಮಾಡುತ್ತಾರೆ ಎನ್ನುವ ಭಾವನೆ ನಮಗೆ ಬರುತ್ತದೆ. ನಾನೊಂದು ಹೇಳುತ್ತೇನೆ, ಚುನಾವಣೆಗಳನ್ನು ಮಾಡುವುದು ಏಕೆ? ಆಡಳಿತ ಕೊಡಬೇಕಾದಾಗ ಅವರಿಗೆ ಒಳ್ಳೆಯ ಪ್ರಾತಿನಿಧ್ಯ ಕೊಡಬೇಕು, ನ್ಯಾಯಯುತವಾಗಿ ಎಲ್ಲಾ ವರ್ಗದವರೂ ಕೂಡ ಇರಬೇಕು,

ಈ ಎಲ್ಲವೂ ಉದ್ದೇಶದಲ್ಲಿದೆ. ಈ ರೀತಿಯಾಗಿ ಏಕಪಕ್ಷೀಯವಾಗಿ calendar of events ಹಾಕಿ ಬಿಡುತ್ತೇವೆ, ನಾಳೆ ಎಲೆಕ್ಷನ್ ಮಾಡಿ ಬಿಡಿ ಎಂದರೆ, will it be fair and free elections? ಇದು ಏಕೆ ಅರ್ಥವಾಗುತ್ತಿಲ್ಲ. ಇದರಲ್ಲಿ ಸರ್ಕಾರ ಸಚಿವ ಸಂಪುಟದ ನಿರ್ಣಯ ಮಾಡಿ ಇಡೀ ಸದನ ನಿರ್ಣಯ ಮಾಡುವ ಮಟ್ಟಕ್ಕೆ ಏಕಪಕ್ಷೀಯವಾಗಿ Election Commission ನನ್ನ ಕೆಲಸ ನಾನು ಮಾಡುತ್ತೇನೆ, ನೀವು ಏನಾದರೂ ಮಾಡಿಕೊಳ್ಳಿ, ನನ್ನ ಮೇಲೆ contempt ಬರುತ್ತದೆ ಎಂದರೆ ಏನರ್ಥ? ನನಗೆ ಅನ್ನಿಸುತ್ತದೆ ನೀವು ಸ್ವಲ್ಪ ಇದರಲ್ಲಿ ಯೋಚನೆ ಮಾಡಬೇಕಾದಂಥ ಅವಶ್ಯಕತೆ ಇದೆ. ಹೌದು Municipalities election ಆಗಲೇ ಬೇಕು. ನ್ಯಾಯಯುತವಾಗಿ TMC ಗಳು CMC ಗಳು ಆಗಬೇಕು. ಮಾನ್ಯ ಶಿವಕುಮಾರರವರು, ನನಗೆ ಐದು ಕೋಟಿ ಕೊಡುತ್ತಾರೆ ರಾಮನಗರಕ್ಕೆ 30 ಕೋಟಿ ಕೊಡುತ್ತಾರೆಂದು ಹೇಳಿದರು. ಹೌದು ಆ Problem ಆಗುತ್ತದೆ. 30 ರಿಂದ 40 TMC ಗಳು, CMC ಗಳು ಆಗುವಂಥ ಅವಕಾಶಗಳಿವೆ. ತುಮಕೂರು ಜಿಲ್ಲೆ ನಮಗೆ Corporation ಆಗುವಂಥ ಅವಕಾಶಗಳಿವೆ. ಇಷ್ಟೆಲ್ಲಾ ಇದ್ದಾಗಲೂ ಕೂಡ ಆ ಸೌಲಭ್ಯವನ್ನು ಅವರಿಗೆ ಕೊಡಬೇಕಾಗುತ್ತದೆ. ಇವತ್ತಿನ ದಿವಸ ನಗರೀಕರಣ ಜಾಸ್ತಿಯಾಗುತ್ತಿರುವುದರಿಂದ ಜನರು ಪಟ್ಟಣಗಳಿಗೆ ಬಂದು ವಾಸ ಮಾಡುತ್ತಿದ್ದಾರೆ. ಆದ್ದರಿಂದ, ಅವರಿಗೆ ಸೌಲಭ್ಯವನ್ನು ಕೊಡಬೇಕಾಗುತ್ತದೆ. ನಮ್ಮ ಸಂವಿಧಾನದ 73 ಮತ್ತು 76ರ ಅಮೆಂಡ್‌ಮೆಂಟ್ ಪ್ರಕಾರ ಅವಕಾಶ ಇಲ್ಲವೆಂಬುದು ನಾನು ಒಪ್ಪುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ:– ಮಾನ್ಯ ಅಧ್ಯಕ್ಷರೆ, ಸಂವಿಧಾನ ನಮ್ಮ ರಾಜ್ಯಕ್ಕೂ ಇದೆ ಮತ್ತು ಆಂಧ್ರಪ್ರದೇಶಕ್ಕೂ ಇದೆ, ಆದರೆ ಆಂಧ್ರಪ್ರದೇಶದವರು ಮಾಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಚುನಾವಣಾ ಆಯೋಗ ಇದನ್ನು ಏಕಪಕ್ಷೀಯವಾಗಿ ಅವರೇ ಮಾಡುವುದಕ್ಕೆ ಬರುತ್ತದೆಯೇ? ಅವರು ಮಾಡಬೇಕಾದಂಥ ಸಂದರ್ಭ ಬಂದಾಗ ಸರ್ಕಾರವನ್ನು ಸಹ ವಿಶ್ವಾಸಕ್ಕೆ

ತೆಗೆದುಕೊಳ್ಳಬೇಕಲ್ಲವೇ? ಅವರೊಬ್ಬರೇ ಮಾಡುವುದಕ್ಕೆ ಬರುತ್ತದೆಯೇ? ಅವರೊಬ್ಬರೇ ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಈ ಮುಸುಕಿನ ಗುದ್ದಾಟ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇನ್ನೊಂದು ವಿಷಯ ಏನೆಂದರೆ, "In view of the circumstances, we are clearly of the view that the State Election Commission is within its right to proceed with the Election within the time frame as required by the Constitution and the State enactments. It will have to proceed on the basis of the existing electoral rolls. As far as the rotation of the seats meant for the reserved categories is concerned, the State Government should furnish its proposal ಈ ವಿಷಯ ಬಿಡಿ. ಆದರೆ, ನಿಮಗೆ option ಇಲ್ಲವೆಂಬ ಪ್ರಶ್ನೆಯೇ ಇಲ್ಲ. ಅಂದರೆ, ಚುನಾವಣಾ ಆಯೋಗದವರು contempt of proceedings ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಸರ್ಕಾರದ ಜೊತೆಗೆ ಸಂಘರ್ಷ ಮಾಡಿಕೊಂಡು ಚುನಾವಣೆಗಳನ್ನು ಮಾಡಿ ಎಂದರೆ ಹೇಗೆ ಆಗುತ್ತದೆ? ಬಹುಶಃ ಇದು ಕೊನೆಯ ವಿಧಾನಸಭೆ ಎಂದೇ ನಾವು ತೀರ್ಮಾನ ಮಾಡಿದ್ದೇವೆ. ತರಾತುರಿಯಲ್ಲಿ ಈಗ ಒಂದು ಬಜೆಟ್ ಅನ್ನು ಸಹ ನಾವು ಮಾಡುತ್ತಿದ್ದೇವೆ. ಕಾರಣ ಏನೆಂದರೆ, ಇನ್ನು ಮೂರು ತಿಂಗಳಲ್ಲಿ ನಮ್ಮ ಅವಧಿ ಮುಗಿದು ಹೋಗುತ್ತದೆ. ಜೂನ್ ನಂತರ ಹೊಸ ಸರ್ಕಾರ ಬರಬೇಕಾಗುತ್ತದೆ. ವಿಧಾನಸಭೆಗೆ ನಾವು ಚುನಾವಣೆಗೆ ಹೋಗುವಂಥ ಸಂದರ್ಭದಲ್ಲಿ ಮುನಿಸಿಪಾಲಿಟಿ ಚುನಾವಣೆ ಮಾಡುವುದಕ್ಕೆ ಆಗುತ್ತದೆಯೇ? ಈಗ ನೀವು ಮುನಿಸಿಪಾಲಿಟಿ ಚುನಾವಣೆ ಕಡೆಗೆ ಗಮನ ಹರಿಸುತ್ತೀರೋ ಅಥವಾ ವಿಧಾನಸಭೆ ಚುನಾವಣೆ ಕಡೆಗೆ ಗಮನ ಹರಿಸುತ್ತೀರೋ ಇದನ್ನು ತಾವು ಪ್ರಾಕ್ಟಿಕಲ್ ಆಗಿ ಹೇಳಿ? ಈಗಿರುವ ವಸ್ತು ಸ್ಥಿತಿ ಚುನಾವಣಾ ಆಯೋಗಕ್ಕೆ ಏಕೆ ಅರ್ಥವಾಗುತ್ತಿಲ್ಲ. ಈಗ technical ಆಗಿ ಚುನಾವಣೆ ಮಾಡಬೇಕೆಂಬ ಕಾರಣಕ್ಕೋಸ್ಕರ ಮಾಡುತ್ತೀರೋ ಅಥವಾ ground realities ನೋಡಿಕೊಂದು free and fair ಆಗಬೇಕೆಂದು

ಚುನಾವಣಾ ಆಯೋಗ ಚುನಾವಣೆ ಮಾಡುತ್ತಿದೆಯೇ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿದ ನಂತರವೂ ನನ್ನ ಮೇಲೆ ದೊಡ್ಡ ಆರೋಪ ಬರುತ್ತದೆ ಆದ್ದರಿಂದ, ಚುನಾವಣೆ ಮಾಡೇಮಾಡುತ್ತೇವೆ ಎಂದರೆ ಏನರ್ಥ? ಸರ್ಕಾರ ಇಲ್ಲದೇ ಇದನ್ನು ಮಾಡುವುದಕ್ಕೆ ಬರುತ್ತದೆಯೇ? ನಾನು ಹೇಳುವುದೇನೆಂದರೆ, ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಂಥ ಸಂದರ್ಭ ಯಾವತ್ತೂ ಸಹ ಬಂದಿರಲಿಲ್ಲ. ಚುನಾವಣೆಗೆ ಯಾರೂ ಸಹ ವಿರೋಧ ಮಾಡುತ್ತಿಲ್ಲ. ಆದರೆ, ನ್ಯಾಯಯುತವಾದ ಚುನಾವಣೆಗಳು ಆಗಬೇಕು. ಇದಕ್ಕೆ ಕಾಲ ಪಕ್ವವಾಗಬೇಕು, ಕಾಲ ಸಂದರ್ಭಕ್ಕೆ ಮಾಡಬೇಕು. ಹೊಸ voter list ಪ್ರಕಾರ ಆಗಬೇಕು. ಇದನ್ನು ಬಿಟ್ಟು ನೀವು ಕೇವಲ ನಿರ್ಣಯ ಮಾಡುವುದರಿಂದ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಈ ಬಗ್ಗೆ ಯಾವ ಕಾನೂನು ಪಂಡಿತರ ಸಲಹೆ ಪಡೆಯುತ್ತೀರೋ ಗೊತ್ತಿಲ್ಲ. ಚುನಾವಣೆ ನಡೆಸುವುದಕ್ಕೆ ಈಗ ಕಷ್ಟವಿದೆ ಎಂಬ ಸರ್ಕಾರದ ನಿರ್ಣಯಕ್ಕೆ ಚುನಾವಣಾ ಆಯೋಗ ಒಪ್ಪಲಿಲ್ಲವೆಂಬ ವಿಷಯದ ಮೇಲೆ ನೀವೇಕೆ ಹೈಕೋರ್ಟ್‌ಗೆ ಹೋಗಬಾರದು? ನ್ಯಾಯಯುತವಾಗಿ ಚುನಾವಣೆ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ? ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ಇದರ ಮೇಲೆ ತಾವು ಕೋರ್ಟ್‌ಗೆ ಹೋಗಿ. ಅವರಿಗೆ ಅವಕಾಶ ಇದ್ದಾಗಲೂ ಸಹ ಈ ಎಲ್ಲ ಅಂಶಗಳ ಬಗ್ಗೆ ವಿಚಾರ ಮಾಡದೇ ಇದ್ದರೆ ಹೇಗೆ? ಇದೇ ಹೌಸ್‌ನಲ್ಲಿ ಮಹಿಳಾ ಮೀಸಲಾತಿಯನ್ನು 50% ಮಾಡಿದ್ದೇವೆ. ಇದು ಅವರ ಹತ್ತಿರ ಎಲ್ಲಿದೆ? 2007ರ ಪ್ರಕಾರ ಹೋಗಬೇಕಾದರೆ ಅವರು 33% ಮಾಡಬೇಕಾಗುತ್ತದೆ. ಈ ಸದನದಲ್ಲಿ ಮಾಡಿದಂಥ ಕಾನೂನನ್ನು ಚುನಾವಣಾ ಆಯೋಗದವರು ಯಾವ ರೀತಿಯಾಗಿ ಉಲ್ಲಂಘನೆ ಮಾಡುವುದಕ್ಕೆ ಬರುತ್ತದೆ? ಇದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಚುನಾವಣಾ ಆಯೋಗದ ಮೇಲೆ ಹೈಕೋರ್ಟ್‌ಗೆ ಹೋಗತಕ್ಕಂಥ ಕೆಲಸ ಮಾಡಿ. ಅವರು ಕುಳಿತುಕೊಂಡು

ಒಂದು ಕಾಗದ ಬರೆದಿದ್ದಾರೆ ಆ ಕಾರಣದ ಮೇಲೆ ಚುನಾವಣೆ ಮಾಡುತ್ತೇನೆ ಎಂದರೆ ಏನರ್ಥ? ಸರ್ಕಾರದ ಸಹಾಯ ಇಲ್ಲದೇ ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇದರಲ್ಲಿ ಸರ್ಕಾರ ಸಹಾಯ ಮಾಡುತ್ತಿಲ್ಲವೆಂಬ ವಿಚಾರ ಅಲ್ಲ. ಇಲ್ಲಿ ಇರುವವರು ಚುನಾವಣೆ ಬೇಡವೆಂದು ಹೇಳುವುದಿಲ್ಲ. ಎಲ್ಲರಿಗೂ ಚುನಾವಣೆ ಬೇಕು. ಆದರೆ, ಕಾಲ ಪಕ್ವ ಆಗಬೇಕಾಗುತ್ತದೆ. ಅದನ್ನು ನೋಡದೇ ಈ ರೀತಿಯಾಗಿ ತೀರ್ಮಾನ ಮಾಡಿಕೊಂಡರೆ ಹೇಗೆ? ನಾವು ಈಗ ಒಂದು ನಿರ್ಣಯ ಮಾಡುತ್ತೇವೆ. ನಿರ್ಣಯ ಮಾಡಿದಂಥ ಸಂದರ್ಭದಲ್ಲಿಯೂ ಕೂಡ ಅದೇ ರೀತಿಯಾದ ಒಂದು ಕ್ರಮ ತೆಗೆದುಕೊಂಡು ರಾತ್ರೋಬೆಳಿಗ್ಗೆ ನೋಟಿಫಿಕೇಷನ್ ಮಾಡುವ ಪ್ರಶ್ನೆ ಬಂದಾಗ ತಾವೇನು ಮಾಡುತ್ತೀರಿ? ಒಂದು ಚುನಾವಣೆಯನ್ನು ಘೋಷಣೆ ಮಾಡಿದರೆ ಅದನ್ನು ನಿಲ್ಲಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಇವತ್ತು ನಿರ್ಣಯವಾದ ಮೇಲೆ ಬೆಳಿಗ್ಗೆ ಹೈಕೋರ್ಟ್ ಮೆಟ್ಟಿಲು ಹತ್ತತಕ್ಕಂಥ ಕೆಲಸವನ್ನು ದಯಮಾಡಿ ಮಾಡಬೇಕು. ಇದರ ಬಗ್ಗೆ ಯೋಚನೆ ಮಾಡಬೇಕೆಂಬುದು ನನ್ನ ಮನವಿಯಾಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಕುಳಿತುಕೊಂಡು ಮಾತನಾಡುತ್ತಿದ್ದರು)

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಮಂತ್ರಿಗಳೆ, ತಾವು ಅಂದರೆ, ಸರ್ಕಾರ political decision ತೆಗೆದುಕೊಳ್ಳಬೇಕು. ಅಧಿಕಾರಿಗಳು ಮತ್ತು ಆಯೋಗದವರು ಹೇಳುವುದನ್ನೆಲ್ಲ ಬಿಟ್ಟು ವಾಸ್ತವಾಂಶ ಹೇಳಿ. ರಾಜಕಾರಣ ಮುಖ್ಯವಲ್ಲ. ಈ ರಾಜ್ಯದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಾವು ತೀರ್ಮಾನ ಮಾಡಿ. ಒಂದು ವಾರ ಆದಮೇಲೆ ತಾವು ಬಜೆಟ್ ಮಾಡಿ ಅನಂತರ dissolution ಆಗಬಹುದು. ಇಲ್ಲದಿದ್ದರೆ Central Election Commission 6 ತಿಂಗಳ ಒಳಗೆ pre-pone ಮಾಡಿ election ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಆ ರೀತಿ ಏನಾದರೂ ಆದರೆ ಏನು ಪರಿಸ್ಥಿತಿ? ಈ ರೀತಿಯಾದ ಬೇಕಾದಷ್ಟು ಸಂದರ್ಭಗಳಿವೆ. ಆದ್ದರಿಂದ, ವಾಸ್ತವಾಂಶ ಗಮನದಲ್ಲಿಟ್ಟುಕೊಂಡು ಮಾಡಿ. ಏಕೆಂದರೆ, ರಾಜ್ಯದಲ್ಲಿ ಏನು ಬೇಕಾದರೂ ಆಗಬಹುದು. ಈ ಮಧ್ಯದಲ್ಲಿ

ನಾಲ್ಕು ದಿನ ಹೆಚ್ಚು ಕಡಿಮೆ ಆದರೆ ಏನು ಬೇಕಾದರೂ ಆಗುತ್ತದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಧೈರ್ಯವಾಗಿ you take a political decision. ಯಾವುದೇ ಕಾರಣಕ್ಕೂ ಮಾನ್ಯ ಜಗದೀಶ್ ಶೆಟ್ಟರ್‌ರವರು ಜೈಲಿಗೆ ಹೋಗದಂತೆ ನಾವೆಲ್ಲರೂ ನೋಡಿಕೊಳ್ಳೋಣ. ಇಷ್ಟು ಗ್ಯಾರಂಟಿ ಮಾತ್ರ ನಾವು ಕೊಡುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್:– ತಮ್ಮ ಪ್ರಕಾರ 8ನೇ ತಾರೀಖಿನ ನಂತರ ಡೌಟ್ ಕಾಣಿಸುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್:– ಆ ರೀತಿ ಬೇಡ. We will assure Mr.Jagadish Shetter will not go to jail. We will be co-operative and we will bail him out.

ಶ್ರೀ ಜಗದೀಶ್ ಶೆಟ್ಟರ್:– ನಾನು ಹೋದರೆ ನಿಮ್ಮನ್ನೂ ಸಹ ಕರೆದುಕೊಂಡು ಹೋಗುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಹೋಗಬೇಕಾದರೆ ನಾವು ಕೂಡ ನಿಮ್ಮ ಜೊತೆ ಬರುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್:– ಏಕೆಂದರೆ, ಮಾನ್ಯ ಶಿವಕುಮಾರ್‌ರವರು ಹಿಂದೆ ಜೈಲ್ ಸಚಿವರಾಗಿದ್ದರು.

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಇಲಾಖೆ ಸಚಿವರು):– ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಜಯಚಂದ್ರರವರು ಬಹಳಷ್ಟು ವಿಷಯಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ಸುಪ್ರೀಂ ಕೋರ್ಟ್‌ನ ಕೊನೆಯ ಪ್ಯಾರಾದ ಪ್ರಕಾರ ಚುನಾವಣಾ ಆಯೋಗಕ್ಕೆ ಸರ್ಕಾರ ನಾಲ್ಕು ತಾರೀಖಿನ ಒಳಗಾಗಿ ಮೀಸಲಾತಿ ಪಟ್ಟಿಯನ್ನು ಕೊಡದಿದ್ದರೆ ಚುನಾವಣೆ ಮಾಡುವುದಕ್ಕೆ ನಮಗೆ ಅಧಿಕಾರ ಕೊಡಿ ಎಂಬ ವಾದವನ್ನು ಅವರು ಮಂಡಿಸುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ option open ಎಂದು ಇದೆ. ಆದರೆ, ನಮಗೆ ಡೈರೆಕ್ಷನ್ ಇದೆ, ಆದ್ದರಿಂದ, ನಾವು ಮಾಡುತ್ತೇವೆಂಬ ಒಂದು ಚರ್ಚೆ ನಡೆದಿದೆ. ನಮ್ಮ ಸಂವಿಧಾನದಲ್ಲಿ ಮತ್ತು ನಮ್ಮ Democratic System

ನಲ್ಲಿ ಚುನಾವಣೆ ಮಾಡುವುದು ಎಷ್ಟು ಮುಖ್ಯವಿದೆಯೋ ಜನತೆಗೆ ನ್ಯಾಯ ಸಿಗುವುದು ಅಷ್ಟೇ ಮುಖ್ಯವಾಗಿದೆ. ಎಸ್‌ಸಿ/ಎಸ್‌ಟಿ ಇರಬಹುದು, ಓಬಿಸಿ ಜನಾಂಗದವರು ಇರಬಹುದು. ಒಟ್ಟಿನಲ್ಲಿ ಅವರಿಗೆ ನ್ಯಾಯ ಸಿಗಬೇಕಾಗುತ್ತದೆ. ಚುನಾವಣೆ ಮಾಡುವುದೊಂದೇ ಸಮಸ್ಯೆಗೆ ಪರಿಹಾರವಲ್ಲ. ಆ ಜನರಿಗೆ ನ್ಯಾಯ ಸಿಗಬೇಕೆಂಬುದು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಇವತ್ತು ಈ ಸದನದ ಎಲ್ಲ ಹಿರಿಯ ಸದಸ್ಯರು ಸಾಕಷ್ಟು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಕಾನೂನು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಬೇಕೆಂಬುದರ ಬಗ್ಗೆ ಅಥವಾ ಮತ್ತೆ ಯಾವುದಾದರೂ ಕೋರ್ಟ್‌ಗೆ ಹೋಗಿ ಹೋರಾಟ ಮಾಡಬೇಕೆಂಬ ವಿಷಯವನ್ನು ತಾವೆಲ್ಲರೂ ಸರ್ಕಾರದ ಗಮನಕ್ಕೆ ತಂದಿದ್ದೀರಿ. ಮಾನ್ಯ ಸದಸ್ಯರಾದ ಶ್ರೀ ಗೂಳಿಹಟ್ಟಿ ಶೇಖರ್‌ರವರು ಮಂಡಿಸಿರುವುದನ್ನು ಸರ್ವಾನುಮತದಿಂದ ಅಂಗೀಕಾರ ಮಾಡಬೇಕೆಂದು ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯವನ್ನು ಇವತ್ತೇ ಚುನಾವಣಾ ಆಯೋಗದ ಗಮನಕ್ಕೆ ತರುತ್ತೇವೆ. ಅನಂತರ ಏನಾದರೂ ಕಾನೂನಿನ ಹೋರಾಟ ಮಾಡುವಂಥ ಪರಿಸ್ಥಿತಿ ಬಂದಾಗ ಸರ್ಕಾರ ಹಿಂದೆ ಸರಿಯುವುದಿಲ್ಲ, ನಾವು ಕಾನೂನು ಹೋರಾಟವನ್ನು ಖಂಡಿತ ಮಾಡುತ್ತೇವೆಂದು ಈ ಸದನಕ್ಕೆ ನಾನು ಭರವಸೆ ಕೊಡುತ್ತೇನೆ.

ಅಧ್ಯಕ್ಷರು:– ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

"ರಾಜ್ಯ ಚುನಾವಣಾ ಆಯೋಗವು 2001ರ ಜನಗಣತಿ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸಲು ಉದ್ದೇಶಿಸಿರುತ್ತದೆ. ಆದರೆ, ಈಗಾಗಲೇ 2011ರ ಜನಗಣತಿ ಕಾರ್ಯವು ಪೂರ್ಣಗೊಂಡಿದ್ದು, ಅದರ ಆಧಾರದ ಮೇಲೆ Ward ಗಳ ಮೀಸಲಾತಿಗಳಲ್ಲಿ ಬದಲಾವಣೆಯಾಗಿರುವುದರಿಂದ ಹಾಗೂ ಹಲವಾರು ಸ್ಥಳೀಯ ಸಂಸ್ಥೆಗಳು ನಗರಪಾಲಿಕೆ, ನಗರಸಭೆಗಳಾಗಿ ಬಡ್ತಿ ಹೊಂದಲು ಅರ್ಹತೆ ಪಡೆದಿರುವುದರಿಂದ ಮತ್ತು ಸರ್ಕಾರದ ಮೀಸಲಾತಿ ಕಾನೂನುಗಳಲ್ಲಿ

ಬಹಳಷ್ಟು ತಿದ್ದುಪಡಿಗಳಾಗಿರುವುದರಿಂದ ನ್ಯಾಯಯುತ ಚುನಾವಣೆ ನಡೆಸಲು ಮತ್ತು ಎಲ್ಲಾ ವರ್ಗಗಳಿಗೆ ನ್ಯಾಯ ಒದಗಿಸಲು ಅನುವಾಗುವಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಬೇಕೆಂದು ಈ ಸದನವು ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತದೆ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ.

ಪ್ರಸ್ತಾವವು ಅಂಗೀಕೃತವಾಗಿದೆ.

ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

9. ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ: ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ):– ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಒಂದು ದೊಡ್ಡ ಭೀಕರವಾದಂಥ ಬರಗಾಲವನ್ನು ನಾವೆಲ್ಲರು ಎದುರಿಸುತ್ತಿದ್ದೇವೆ. ಮೊದಲು ಬರಗಾಲ 142 ತಾಲ್ಲೂಕು ಘೋಷಣೆಯಾಗಿ ಈಗ 157 ತಾಲ್ಲೂಕುಗಳಿಗೆ ಬರಗಾಲ ಬಂದಿದೆ.

ಶ್ರೀ ವೆಂಕಟರಾವ್ ನಾಡಗೌಡ:– ಮಾನ್ಯ ಶಿವಕುಮಾರ್‌ರವರೆ, ಇದೂ ಒಂದು ಕಾರಣ ಚುನಾವಣೆ ಮುಂದೆ ಹೋಗುವುದಕ್ಕೆ.

ಶ್ರೀ ಡಿ.ಕೆ. ಶಿವಕುಮಾರ್:– ಬರಗಾಲ ಇದ್ದಾಗ ಚುನಾವಣೆ ಮುಂದಕ್ಕೆ ಹಾಕುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ.

ಶ್ರೀ ವೆಂಕಟರಾವ್ ನಾಡಗೌಡ:– ನಾನು ಸಹ ಅದೇ ವಿಷಯವನ್ನೇ ಹೇಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, 157 ತಾಲ್ಲೂಕುಗಳು ಇವತ್ತು ಬರಗಾಲವನ್ನು ಅನುಭವಿಸುತ್ತಿವೆ. ನಾವು ಇವತ್ತು ಈ ನೀರಿನ